ಜಿಲ್ಲಾ ಆಸ್ಪತ್ರೆಗಳು

468 (819); ಶ್ರೀ ಜೋಪಯ್ಯ ಕೆ ಜಿ. (ವಿರಾಜಪೇಟೆ)

ಅ) ಕೊಡಗು ಜಿಲ್ಲೆಯಲ್ಲಿ ಜಿಲ್ಲಾ ಆಸ್ಪತ್ರೆಯನ್ನು ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೇರಿ ಎಷ್ಟು ಆಸ್ಪತ್ರೆಗಳು ಇವೆ, (ತಾಲ್ಲೂಕುವಾರು ವಿವರಗಳನ್ನು ನೀಡುವುದು)

ಆ) ಈ ಆರೋಗ್ಯ ಕೇಂದ್ರಗಳಲ್ಲಿ ಎಷ್ಟು ತಜ್ಞ ವೈದ್ಯರು ಹಾಗೂ ವೈದ್ಯರ ಕೊರತೆ ಇದೆ, (ತಾಲ್ಲೂಕುವಾರು, ಆರೋಗ್ಯ ಕೇಂದ್ರಗಳ ವಿವರ ನೀಡುವುದು)

ಇ) ಈ ಆಸ್ಪತ್ರೆಗಳಲ್ಲಿ ಎಷ್ಟು ವೈದ್ಯಕೀಯೇತರ ಹುದ್ದೆಗಳು ಮಂಜೂರಾಗಿವೆ, ಎಷ್ಟು ಹುದ್ದೆಗಳು ಖಾಲಿ ಇವೆ; ಹುದ್ದೆಗಳನ್ನು ತುಂಬಲು ಕೈಗೊಂಡ ಕ್ರಮಗಳೇನು; (ವಿವರ ನೀಡುವುದು)

ಶ್ರೀ ಯು.ಟಿ. ಖಾದರ್(ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) **ಮಡಿಕೇರಿ ತಾಲ್ಲೂಕು:**

1. ಜಿಲ್ಲಾ ಆಸ್ಪತ್ರೆ–1
2. ಸಮುದಾಯ ಆರೋಗ್ಯ ಕೇಂದ್ರ–1
3. ಪ್ರಾಥಮಿಕ ಆರೋಗ್ಯ ಕೇಂದ್ರ –5

ವಿರಾಜಪೇಟ ತಾಲ್ಲೂಕು:

1. ಸಾರ್ವಜನಿಕ ಆಸ್ಪತ್ರೆ–1
2. ಸಮುದಾಯ ಆರೋಗ್ಯ ಕೇಂದ್ರ–4
3. ಪ್ರಾಥಮಿಕ ಆರೋಗ್ಯ ಕೇಂದ್ರ–11
4. ಎಂ.ಟಿ.ಹೆಚ್.ಯು–1

ಸೋಮವಾರಪೇಟ ತಾಲ್ಲೂಕು:

1 ಸಾರ್ವಜನಿಕ ಆಸ್ಪತ್ರೆ–1
2 ಸಮುದಾಯ ಆರೋಗ್ಯ ಕೇಂದ್ರ–2
3 ಪ್ರಾಥಮಿಕ ಆರೋಗ್ಯ ಕೇಂದ್ರ–13
4. ಎಂ.ಟಿ.ಹೆಚ್ ಯು–1

ಆ) **ಮತ್ತು** ಇ) ಸದರಿ ಆರೋಗ್ಯ ಕೇಂದ್ರಗಳಲ್ಲಿ ತಜ್ಞ ವೈದ್ಯರು/ಪ್ರಾಧ್ಯರು ಹಾಗೂ ವೈದ್ಯೇತರ ಹುದ್ದೆಗಳ ವಿವರ ಅನುಬಂಧ–1ರಲ್ಲಿ ನೀಡಲಾಗಿದೆ. ಹಾಗೂ ಖಾಲಿ ಇರುವ ಹುದ್ದೆಗಳನ್ನು ಭರ್ತಿ ಮಾಡಲು ತೆಗೆದುಕೊಂಡ ಕ್ರಮದ ಬಗ್ಗೆ ಅನುಬಂಧ–2ರಲ್ಲಿ ನೀಡಲಾಗಿದೆ.

ಪ್ರಶ್ನೆ ಸಂ: 819ಕ್ಕೆ ಅನುಬಂಧ–1

ಜಿಲ್ಲೆಯಲ್ಲಿ ಮಂಜೂರಾದ ಕಾರ್ಯನಿರತ ಹಾಗೂ ಖಾಲಿ ಇರುವ ತಜ್ಞ ವೈದ್ಯರ ವಿವರ (ತಾಲ್ಲೂಕುವಾರು)							
ಕ್ರ.ಸಂ	ತಾಲ್ಲೂಕು	ಸಂಸ್ಥೆಯ ಹೆಸರು	ಹುದ್ದೆಯ ವಿವರ	ಮಂಜೂರು	ಕಾರ್ಯನಿರತ	ಖಾಲಿ	ಷರಾ
1	ಮಡಿಕೇರಿ	ಜಿಲ್ಲಾ ಆಸ್ಪತ್ರೆ ಮಡಿಕೇರಿ		37	24	13	
		ಸಮುದಾಯ ಆರೋಗ್ಯ ಕೇಂದ್ರ, ನಾಪೋಕ್ಲು	ತಜ್ಞ ವೈದ್ಯರು	4	2	2	ಇಬ್ಬರು ಎಂ ಬಿ ಬಿ ಎಸ್. ವೈದ್ಯರು ಎದುರು ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ
	ವಿರಾಜಪೇಟೆ	ತಾಲ್ಲೂಕು ಆಸ್ಪತ್ರೆ ವಿರಾಜಪೇಟೆ	ತಜ್ಞ ವೈದ್ಯರು	13	6	7	
		ಸಮು ಕೇಂದ್ರ ಪಾಲಿಬೆಟ್ಟ	ತಜ್ಞ ವೈದ್ಯರು	6	1	5	
		ಸಮು ಕೇಂದ್ರ ಸಿದ್ದಾಪುರ	ತಜ್ಞ ವೈದ್ಯರು	5	2	3	
		ಸಮು ಕೇಂದ್ರ ಗೋಣಿಕೊಪ್ಪ	ತಜ್ಞ ವೈದ್ಯರು	4	2	2	

		ಸಆ ಕೇಂದ್ರ ಕುಟ್ಟ	ತಜ್ಞ ವೈದ್ಯರು	4	1	3	ಒಬ್ಬರು ಎಂ ಬಿ ಜಿ ಎಸ್ ವೈದ್ಯರು ಎದುರು ಹುದ್ದೆಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದಾರೆ
	ಸೋಮವಾರಪೇಟೆ	ತಾಲ್ಲೂಕು ಆಸ್ಪತ್ರೆ ಸೋಮವಾರಪೇಟೆ		10	5	5	
		ಸಆ ಕೇಂದ್ರ ಶನಿವಾರಸಂತೆ		4	2	2	
		ಸಆ ಕೇಂದ್ರ ಕುಶಾಲನಗರ		6	3	3	
ಜಿಲ್ಲೆಯಲ್ಲಿ ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ವಿವರ							
1	ಮಡಿಕೇರಿ	ಪ್ರಾಆ ಕೇಂದ್ರ ಬಾಗಮಂಡಲ		2	1	1	ಮಹಿಳಾ ವೈದ್ಯರು ಖಾಲಿ
2	ವಿರಾಜಪೇಟೆ	ಪ್ರಾಆ ಕೇಂದ್ರ ಹುದಿಕೇರಿ		3	2	1	
3	ಸೋಮವಾರಪೇಟೆ	ಪ್ರಾಆ ಕೇಂದ್ರ ಆಲೂರು ಸಿದ್ದಾಪುರ		2	1	1	ಮಹಿಳಾ ವೈದ್ಯರು ಖಾಲಿ
4		ಪ್ರಾಆ. ಕೇಂದ್ರ ಮಾದಪುರ		2	1	1	ಮಹಿಳಾ ವೈದ್ಯರು ಖಾಲಿ
-		ಪ್ರಾ ಆ ಕೇಂದ್ರ ಸುಂಟಿಕೊಪ್ಪ		3	2	1	

ಅರೆ ವೈದ್ಯಕೀಯ ಸಿಬ್ಬಂದಿಗಳ ಮಂಜೂರಾತಿ ವಿವರ					
ಕ್ರ.ಸಂ.	ತಾಲ್ಲೂಕು	ಮಂಜೂರಾದ ಹುದ್ದೆಗಳ ವಿವರ	ಮಂಜೂರಾದ ಹುದ್ದೆಗಳ ಸಂಖ್ಯೆ	ಕಾರ್ಯನಿರತ	ಖಾಲಿ
1	ಮಡಿಕೇರಿ	ಸಹಾಯಕ ಆಡಳಿತಾಧಿಕಾರಿಗಳು	1	1	0
		ಜಿಲ್ಲಾ ಆರೋಗ್ಯ ಶಿಕ್ಷಣಾಧಿಕಾರಿ	1	1	0
		ಸರ್ವೀಸ್ ಇಂಜಿನಿಯರ್	1	0	1
		ಎಂಟಾಮಲಾಜಿಸ್ಟ್	1	1	0
		ಡಿ.ಎನ್.ಓ.	2	0	2
		ಮೈಕ್ರೋ ಬಯಲಾಜಿಸ್ಟ್	1	0	1
		ಆರೋಗ್ಯ ಮೇಲ್ವಿಚಾರಕರು	1	0	1
		ಕಚೇರಿ ಅಧೀಕ್ಷಕರು	4	2	2
		ಪ್ರ.ದ.ಸ	13	5	8
		ದ್ವಿ.ದ.ಸ	8	5	3
		ಕ್ಲರ್ಕ್/ಟೈಪಿಸ್ಟ್	1	0	1
		ಉಪ ಆರೋಗ್ಯ ಶಿಕ್ಷಣಾಧಿಕಾರಿ	2	1	1
		ಪ್ರಾಶೂಷಕ ದಾದಿ	15	11	4
		ಹಿ.ಮ.ಆ.ಸ	6	4	2
		ಕಿ.ಮ.ಆ.ಸ.	36	32	4
		ಹಿ.ಪ್ರ.ಆ.ಸ	11	0	11

		ಕಿ ಪು.ಆ ಸ	20	8	12
		ಔಷಧಿ ವಿತರಕರು	6	3	3
		ಹಿ ಪ್ರಯೋಗ ಶಾಲಾ ತಂತ್ರಜ್ಞರು	4	0	4
		ಕಿ ಪ್ರಯೋಗ ಶಾಲಾ ತಂತ್ರಜ್ಞರು	8	6	2
		ಕ್ಷ-ಕಿರಣ ತಂತ್ರಜ್ಞರು	2	2	0
		ನೇತ್ರಾಧಿಕಾರಿ	2	1	1
		ಸ್ಟೇನೋ ಗ್ರಾಪರ್	2	0	2
		ಬೆರಳಚ್ಚುಗಾರರು	2	0	2
		ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ	2	1	1
		ಸಹಾಯಕ ಸಾಂಖಿಕ ಅಧೀಕಾರಿ	2	0	2
		ವಾಹನ ಚಾಲಕರು	13	9	4
		ಗ್ರೂಪ್ ಡಿ	50	30	20
2	ವಿರಾಜಪೇಟೆ	ಕಛೇರಿ ಅಧೀಕ್ಷಕರು	1	0	1
		ಪ್ರ ದ ಸ	9	1	8
		ದ್ವಿ.ದ.ಸ.	10	4	6
		ಟೈಕರ್ಕ್/ಟೈಪಿಸ್ಟ್	2	1	1
		ಶ್ರೂಷಕ ದಾದಿ	32	29	3
		ಹಿ.ಮ ಆ ಸ	6	5	1
		ಕಿ.ಮ.ಆ.ಸ.	78	64	14

		ಹಿ ಪು.ಆ.ಸ.	5	0	5
		ಕಿ.ಪು.ಆ.ಸ	25	8	17
		ಔಷಧಿ ವಿತರಕರು	14	5	9
		ಕಿ. ಪ್ರಯೋಗ ಶಾಲಾ ತಂತ್ರಜ್ಞರು	11	7	4
		ಕ್ಷ-ಕಿರಣ ತಂತ್ರಜ್ಞರು	3	3	0
		ನೇತ್ರಾಧಿಕಾರಿ	1	0	1
		ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ	2	1	1
		ವಾಹನ ಚಾಲಕರು	6	3	3
		ಗ್ರೂಪ್ ಡಿ	73	24	49
3	**ಸೋಮವಾರಪೇಟೆ**	ಕಚೇರಿ ಅಧೀಕ್ಷಕರು	2	0	2
		ಪ್ರ.ದ.ಸ	11	4	7
		ದ್ವಿ.ದ.ಸ.	11	9	2
		ಕ್ಲರ್ಕ್/ಟೈಪಿಸ್ಟ	3	1	2
		ಪ್ರಾಪೋಷಕ ದಾದಿ	16	16	0
		ಹಿ.ಮ.ಆ.ಸ.	8	6	2
		ಕಿ.ಮ.ಆ.ಸ	80	78	2
		ಹಿ.ಪು.ಆ.ಸ.	8	2	6
		ಕಿ ಪು ಆ ಸ.	31	17	14

		ಔಷಧಿ ವಿತರಕರು	16	4	12
		ಓ ಪ್ರಯೋಗ ಶಾಲಾ ತಂತ್ರಜ್ಞರು	1	0	1
		ಕಿ. ಪ್ರಯೋಗ ಶಾಲಾ ತಂತ್ರಜ್ಞರು	13	11	2
		ಕ್ಷ-ಕಿರಣ ತಂತ್ರಜ್ಞರು	2	2	0
		ನೇತ್ರಾಧಿಕಾರಿ	1	1	0
		ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ	2	0	2
		ವಾಹನ ಚಾಲಕರು	8	6	2
		ಗ್ರೂಪ್ ಡಿ	74	37	37

ಅನುಬಂಧ–2

ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ವ್ಯಾಪ್ತಿಯಡಿ ಬರುವ ಸರ್ಕಾರಿ ಆಸ್ಪತ್ರೆಗಳಲ್ಲಿ ಖಾಲಿಯಿರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, ತಜ್ಞ ವೈದ್ಯರು, ಮತ್ತು ಇತರೆ ಸಿಬ್ಬಂದಿ ಹುದ್ದೆಗಳನ್ನು ತುಂಬಲು ತೆಗೆದುಕೊಂಡ ಕ್ರಮಗಳ ವಿವರಗಳು.

1 ರಾಷ್ಟ್ರೀಯ ಗ್ರಾಮೀಣ ಆರೋಗ್ಯ ಅಭಿಯಾನ (ಎನ್ ಆರ್.ಹೆಚ್.ಎಂ)ದ ಅಡಿಯಲ್ಲಿ ಸ್ತ್ರೀರೋಗ ತಜ್ಞತೆ, ಅರವಳಿಕೆ ಹಾಗೂ ಮಕ್ಕಳ ತಜ್ಞತೆಯಲ್ಲಿ ಗೌರವ ಧನದ ಆಧಾರದ ಮೇಲೆ ತಜ್ಞ ವೈದ್ಯರನ್ನು ನೇಮಿಸಿಕೊಳ್ಳಲು ಸಿ–ಗುಂಪಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಅನ್ವಯಿಸುವಂತೆ ಮಾಸಿಕ ₹ 80,000/– ಹಾಗೂ ಇತರೆ ಎಲ್ಲಾ ಜಿಲ್ಲೆಗಳಿಗೆ ₹ 60,000/–ದಂತೆ ನೀಡಲು ಅವಕಾಶ ಕಲ್ಪಿಸಲಾಗಿದೆ.

2. ಕೆ.ಹೆಚ್.ಎಸ್.ಡಿ.ಆರ್.ಪಿ ಯೋಜನೆಯಡಿಯಲ್ಲಿ ಇತರೆ ತಜ್ಞತೆಗಳಿಗೆ (ಮಕ್ಕಳ ತಜ್ಞರು, ಸ್ತ್ರೀರೋಗ ತಜ್ಞರು ಹಾಗೂ ಅರವಳಿಕೆ ತಜ್ಞರನ್ನು ಹೊರತುಪಡಿಸಿ) ಸಂಬಂಧಪಟ್ಟಂತೆ, ಮೇಲೆ ತಿಳಿಸಿದ ಜಿಲ್ಲೆಗಳಲ್ಲಿ ಕ್ರಮವಾಗಿ ಮಾಸಿಕ ₹ 65,000/– ಹಾಗೂ ₹ 50,000/– ದಂತೆ ಗೌರವಧನ ನೀಡಲಾಗುತ್ತಿದೆ. ಮುಂದುವರೆದು, ರೀಟೈನರ್‌ಷಿಪ್ ಆಧಾರದಲ್ಲಿ ನೇಮಕ ಮಾಡುವ ಎಲ್ಲಾ ತಜ್ಞ ವೈದ್ಯರಿಗೆ ಸಂಬಂಧಿಸಿದಂತೆ ನೀಡಲಾಗುತ್ತಿದ್ದ ಗೌರವಧನವನ್ನು ಸಿ–ಗುಂಪಿನ ಜಿಲ್ಲೆಗಳು ಹಾಗೂ ಉತ್ತರ ಕನ್ನಡ, ಕೊಡಗು ಮತ್ತು ಬಳ್ಳಾರಿ ಜಿಲ್ಲೆಗಳಿಗೆ ಅನ್ವಯಿಸುವಂತೆ ಮಾಸಿಕ ₹ 5,000/– ದಿಂದ ₹ 10,000/– ಕ್ಕೆ ಹೆಚ್ಚಿಸಿ ಹಾಗೂ ಇತರ ಎಲ್ಲಾ ಜಿಲ್ಲೆಗಳಿಗೆ ₹ 8,000/– ದಂತೆ ನೀಡಿ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಲಾಗಿದೆ. ಮುಂದುವರೆದು, ಸದರಿ ತಜ್ಞರು ಹೊರ ರೋಗಿ ವಿಭಾಗದಲ್ಲಿ ಕಾರ್ಯನಿರ್ವಹಿಸಿದ್ದಲ್ಲಿ ದಿನವೊಂದಕ್ಕೆ ₹ 1,000/– ದಂತೆ ಗೌರವ ಧನ ನೀಡಲು ಅವಕಾಶ ಕಲ್ಪಿಸಲಾಗಿದೆ.

3. ಮೇಲೆ ತಿಳಿಸಿದಂತೆ ಎನ್ ಆರ್.ಹೆಚ್ ಎಂ./ಕೆ.ಹೆಚ್ ಎಸ್.ಡಿ ಆರ್ ಪಿ. ಅಡಿಯಲ್ಲಿ ಅವಕಾಶಗಳನ್ನು ಕಲ್ಪಿಸಿದ್ದಾಗ್ಯೂ, ಎನ್.ಆರ್.ಹೆಚ್.ಎಂ. ಅಡಿಯಲ್ಲಿ ಕೇವಲ 60 ತಜ್ಞ ವೈದ್ಯರು ಮತ್ತು 70 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳು ಹಾಗೂ ಕೆ.ಹೆಚ್ ಎಸ್.ಡಿ.ಆರ್ ಪಿ. ಅಡಿಯಲ್ಲಿ ಕೇವಲ 63 ವಿವಿಧ ತಜ್ಞತೆ ಹೊಂದಿರುವ ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ. ಒಟ್ಟಾರೆ, ಸರ್ಕಾರಿ ಆಸ್ಪತ್ರೆ/ಕೇಂದ್ರಗಳಲ್ಲಿ ತಜ್ಞ ವೈದ್ಯರು ಕರ್ತವ್ಯ ನಿರ್ವಹಿಸಲು ಮುಂದೆ ಬರುತ್ತಿರುವವರ ಸಂಖ್ಯೆ ಉತ್ತೇಜನಕಾರಿಯಾಗಿಲ್ಲ.

4 ಎಂ ಬಿ.ಬಿ.ಎಸ್ ವೈದ್ಯರಿಗೆ ಅರವಳಿಕೆ ಹಾಗೂ ಸಿಜೇರಿಯನ್ ಶಸ್ತ್ರಚಿಕಿತ್ಸೆಗಳಿಗೆ ತರಬೇತಿ ನೀಡಲಾಗುತ್ತಿದ್ದು, ಈ ಮೂಲಕ ಸ್ತ್ರೀರೋಗ ಹಾಗೂ ಅರವಳಿಕೆ ತಜ್ಞರ ಕೊರತೆಯನ್ನು ನೀಗಿಸಲು ಕ್ರಮವಹಿಸಲಾಗಿದೆ.

5 ಕರ್ನಾಟಕ ಲೋಕಸೇವಾ ಆಯೋಗದ ಮೂಲಕ 600 ತಜ್ಞ ವೈದ್ಯರ ಹುದ್ದೆಗಳನ್ನು ನೇರ ನೇಮಕಾತಿ ಮೂಲಕ ಭರ್ತಿ ಮಾಡಲು ಇತ್ತೀಚೆಗೆ ಕ್ರಮ ಕೈಗೊಳ್ಳಲಾಗಿ ಒಟ್ಟು 252 ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ್ದರು. ಆಯ್ಕೆಯಾದ ಎಲ್ಲಾ 252 ಅಭ್ಯರ್ಥಿಗಳಿಗೆ ಕೌನ್ಸಿಲಿಂಗ್ ಮೂಲಕ ಸ್ಥಳ ನಿಯುಕ್ತಿ ಮಾಡಲು ಕ್ರಮ ಕೈಗೊಳ್ಳಲಾಗಿ, ಕೇವಲ 137 ಅಭ್ಯರ್ಥಿಗಳು ಸ್ಥಳ ಆಯ್ಕೆ ಮಾಡಿಕೊಂಡರು. ಆ ಪೈಕಿ ಕೇವಲ 75 ಅಭ್ಯರ್ಥಿಗಳು ಮಾತ್ರ ಕಾರ್ಯವರದಿ ಮಾಡಿಕೊಂಡಿದ್ದಾರೆ.

6. ಎಂ ಬಿ.ಬಿ ಎಸ್. ವಿದ್ಯಾರ್ಹತೆಯ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಒಟ್ಟು 2586 ಹುದ್ದೆಗಳು ಮಂಜೂರಾಗಿದ್ದು, ಆ ಪೈಕಿ ಇತ್ತೀಚೆಗೆ ಗುತ್ತಿಗೆ ಆಧಾರದ ಮೇಲೆ 118 ಅಲೋಪತಿ ಮತ್ತು 45 ಆಯುಷ್ ಹಾಗೂ 230 ಬಂಧ-ಪತ್ರ ಅನುಷ್ಠಾನಕೋಶದಿಂದ ನೇಮಕಗೊಂಡ ವೈದ್ಯರು ಸೇರಿದಂತೆ ಒಟ್ಟು 2341 ವೈದ್ಯರು ಕರ್ತವ್ಯ ನಿರ್ವಹಿಸುತ್ತಿದ್ದಾರೆ 245 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳ ಹುದ್ದೆಗಳು ಖಾಲಿಯಿವೆ. ದಿನಾಂಕ: 28-06-2013 ರಂದು ಖಾಲಿ ಇರುವ ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿಗಳನ್ನು ಗುತ್ತಿಗೆ ಆಧಾರದ ಮೇಲೆ ನೇಮಿಸಲು ಜಿಲ್ಲಾಧಿಕಾರಿಗಳಿಗೆ ಸರ್ಕಾರವು ಅನುಮತಿ ನೀಡಿದೆ. ನೇಮಕಾತಿ ಪ್ರಕ್ರಿಯೆಯು ಚಾಲ್ತಿಯಲ್ಲಿದೆ

7. ಇಲಾಖೆಯಲ್ಲಿ ಬ್ಯಾಕ್‌ಲಾಗ್ ಇದ್ದ ಹುದ್ದೆಗಳಲ್ಲಿ 107 ಕಿರಿಯ ಆರೋಗ್ಯ ಸಹಾಯಕರು (ಪುರುಷ) ಮತ್ತು 16 ಫಾರ್ಮಸಿಸ್ಟ್ ಹುದ್ದೆಗಳಿಗೆ ನೇಮಕಾತಿ ಆದೇಶವನ್ನು ಇತ್ತೀಚೆಗೆ ನೀಡಲಾಗಿದೆ

8. ಆರೋಗ್ಯ ಇಲಾಖೆಯಲ್ಲಿ ಈ ಕೆಳಕಂಡ ಹುದ್ದೆಗಳಿಗೆ ನೇರ ನೇಮಕಾತಿ ಮಾಡಲು ಪ್ರಕ್ರಿಯೆ ಜಾರಿಯಲ್ಲಿದ್ದು ಈ ಪ್ರಕ್ರಿಯೆಯು ಅಂತಿಮ ಹಂತದಲ್ಲಿರುತ್ತದೆ.

ಕ್ರ.ಸಂ	ಹುದ್ದೆಗಳ ಪದನಾಮ	ಅಧಿಸೂಚಿಸಿರುವ ಹುದ್ದೆಗಳ ಸಂಖ್ಯೆ
1	ಕಿರಿಯ ಆರೋಗ್ಯ ಸಹಾಯಕರು (ಪುರುಷ)	314
2	ಕಿರಿಯ ಆರೋಗ್ಯ ಸಹಾಯಕರು (ಮಹಿಳೆ)	735
3	ಕುಷ್ಠರೋಗದಿಂದ ಗುಣಮುಖಹೊಂದಿದ ಗ್ರೂಪ್ 'ಡಿ' ಹುದ್ದೆಗಳು	100
4	ಹಾಸ್ಪಿಟಲ್ ಅಟೆಂಡೆಂಟ್ ಗ್ರೇಡ್-2 ಗ್ರೂಪ್ 'ಡಿ'	2323
	ಒಟ್ಟು	**3579**

9 ಈ ಕೆಳಕಂಡ ಖಾಲಿ ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಸಮಿತಿಯ ಮುಖಾಂತರ ಭರ್ತಿ ಮಾಡಲು ಆರ್ಥಿಕ ಇಲಾಖೆ ಅನುಮತಿ ನೀಡಿದ್ದು, ಹೈದ್ರಾಬಾದ್-ಕರ್ನಾಟಕ ಭಾಗದ ಮೀಸಲಾತಿ ನಿಯಮಗಳ ಬಗ್ಗೆ ಆದೇಶ ಬಂದ ತಕ್ಷಣ ಹುದ್ದೆಗಳನ್ನು ಭರ್ತಿ ಮಾಡಲು ಕ್ರಮ ಕೈಗೊಳ್ಳಲಾಗುವುದು.

ಕ್ರ ಸಂ	ಹುದ್ದೆ	ಭರ್ತಿ ಮಾಡುವ ಸಂಖ್ಯೆ
1	ವಾಹನ ಚಾಲಕರು	318
2	ಗ್ರೂಪ್ ಸಿ ವೃಂದದ ಅರೆವೈದ್ಯಕೀಯ ಹುದ್ದೆಗಳು	450
3	ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ	331
4.	ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ	145
5.	ಹಿರಿಯ ಪ್ರಯೋಗ ಶಾಲಾ ಟೆಕ್ನಾಲಾಜಿಸ್ಟ್	87
	ಒಟ್ಟು	**1331**